**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,**

DTE-ADMI0SCH1/5/2020

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ ಬೆಂಗಳೂರು-560 001.
ದಿ: 05-11-2020.

**-:: ಸುತ್ತೋಲೆ ::-**

**ವಿಷಯ :** **2019-20ನೇ** ಸಾಲಿನಲ್ಲಿ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕಗಳ ವಿವರವನ್ನು ತಂತ್ರಾಂಶದಲ್ಲಿ ಭರ್ತಿಮಾಡಿ ಸಲ್ಲಿಸದೇ ಇರುವ ಬಗ್ಗೆ.

**ಉಲ್ಲೇಖ :** 1. ಯೋಜನಾ ನಿರ್ದೇಶಕರು ಎಸ್.ಎಸ್.ಪಿ ಇ-ಆಡಳಿತ ಇಲಾಖೆ ಇವರ ಈ-ಮೇಲ್ ಪತ್ರದ ದಿನಾಂಕ: 16-10-2020.

2.ಇದೇ ಇಲಾಖೆಯ ಸುತ್ತೋಲೆ ಪತ್ರ ಸಂಖ್ಯೆ: ಡಿಟಿಇ 09 ಎಸ್‌ಸಿಹೆಚ್(1) 2019-20 ದಿನಾಂಕ: 30-12-2019 ಮತ್ತು 07-01-2020.

**-0000000-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಸುತ್ತೋಲೆಗಳಲ್ಲಿ ಸರ್ಕಾರಿ/ಅನುದಾನಿತ/ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ 2019-20ನೇ ಸಾಲಿನ ಪ್ರಥಮ/ದ್ವಿತೀಯ/ತೃತೀಯ ವರ್ಷಕ್ಕೆ ಪ್ರವೇಶಾತಿ ಪಡೆದು, ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಆಯಾ ಪಾಲಿಟೆಕ್ನಿಕ್‌ಗಳಲ್ಲಿ ಪಾವತಿಸಿರುವ ವಿವಿಧ ಶುಲ್ಕಗಳ ವಿವರಗಳನ್ನು ಸಂಸ್ಥೆಯ ಪ್ರವೇಶ ಪ್ರಕ್ರಿಯೆಗೆ ನೀಡಿರುವ Loginನ ತಂತ್ರಾಂಶದಲ್ಲಿ ನಿಗದಿತ ಸಮಯದೊಳಗೆ ಕಡ್ಡಾಯವಾಗಿ ಭರ್ತಿಮಾಡಲು ರಾಜ್ಯದ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಸುತ್ತೋಲೆಗಳ ಮುಖಾಂತರ ತಿಳಿಸಿದರು ಸಹ, ಹಲವು ಸಂಸ್ಥೆಯವರ ನಿರ್ಲಕ್ಷ್ಯತೆಯಿಂದ, ಅರ್ಹರಿರುವ 3013 ವಿದ್ಯಾರ್ಥಿಗಳು ಶುಲ್ಕ ಮರುಪಾವತಿ ಪಡೆಯದೇ ವಂಚಿತರಾಗಿರುತ್ತಾರೆ ಎಂಬ ಮಾಹಿತಿಯನ್ನು ಇ-ಆಡಳಿತ ಇಲಾಖೆಯು ಉಲ್ಲೇಖ(1)ರಲ್ಲಿ ತಿಳಿಸಿರುತ್ತಾರೆ.

ಮುಂದುವರೆದು, ಅಪರ ಮುಖ್ಯ ಕಾರ್ಯದರ್ಶಿಗಳು, ಇ-ಆಡಳಿತ ಇಲಾಖೆ, ಇವರು ಈ ವಿಷಯವನ್ನು ಗಂಭಿರವಾಗಿ ಪರಿಗಣಿಸಿದ್ದು, ವಂಚಿತ ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ನೀಡಲು ತಿಳಿಸಿರುವುದರಿಂದ ಪುನಹ ಸಂಸ್ಥೆಯ ಪ್ರಾಂಶುಪಾಲರು **https://dtetech.karnataka.gov.in/dteone/emp/Login.aspx** ರಲ್ಲಿ ಸಂಸ್ಥೆಯ ಪ್ರವೇಶ ಪ್ರಕ್ರಿಯೆಗೆ ನೀಡಿರುವ ತಂತ್ರಾಂಶದಲ್ಲಿ Login ಮಾಡಿ, 2019-20ನೇ ಸಾಲಿನ **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಎಸ್.ಎಸ್.ಪಿ ತಂತ್ರಾಂಶದ ಮೂಲಕ ಅರ್ಜಿಸಲ್ಲಿಸಿ ಶುಲ್ಕ ಮರುಪಾವತಿ ಪಡೆಯದೇ ಇರುವ ವಿದ್ಯಾರ್ಥಿಗಳನ್ನು ಮಾತ್ರ ಪತ್ತೆಮಾಡಿ ಇಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ದಿನಾಂಕ: 12-11-2020 ರೊಳಗಾಗಿ ತಂತ್ರಾಂಶದಲ್ಲಿ ಕಡ್ಡಾಯವಾಗಿ ಭರ್ತಿಮಾಡುವುದು. ಪುನಹಃ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯದೇ ವಂಚಿತರಾದ್ದಲ್ಲಿ, ಸಂಸ್ಥೆಯ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ ಮತ್ತು ಸರ್ಕಾರದ ಗಮನಕ್ಕೆ ತಂದು ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.** ತಂತ್ರಾಂಶದ ಹೆಚ್ಚಿನ ಮಾಹಿತಿಗಾಗಿ ಸಂಖ್ಯೆ: 9731405503, 9448039877, 9741884442, ಗೆ ಸಂಪರ್ಕಿಸಬಹುದಾಗಿದೆ.

ಆಯುಕ್ತರು

*ಇವರಿಗೆ :-*

1. **ಪ್ರಾಂಶುಪಾಲರು**, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್ ಇವರ ಮುಂದಿನ ಕ್ರಮಕ್ಕಾಗಿ.
2. **ಸಂಯೋಜನಾಧಿಕಾರಿಯವರು**, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು).